# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
# ಹಿರಿಯ ಶ್ರೇಣಿ, ತೀರ್ಥಹಳ್ಳಿ
# ಸಿ.ಸಿ. ನಂ. 692/2022

| | | |
|---|---|---|
| ಸಾಕ್ಷಿದಾರರ ಹೆಸರು | ಅನಿಲ್ ಕುಮಾರ್ ಎಂ. ಆರ್. | |
| ತಂದೆಯ ಹೆಸರು | ರುದ್ರಪ್ಪ ಎಸ್. | ಸಿಡಬ್ಲ್ಯೂ–2 |
| ವಯಸ್ಸು | 39 ವರ್ಷ | ಪಿಡಬ್ಲ್ಯೂ–4 |
| ಉದ್ಯೋಗ | ಉಪ ವಲಯ ಅರಣ್ಯಾಧಿಕಾರಿ, ಆಗುಂಬೆ ವಲಯ | |
| ವಾಸಸ್ಥಳ | ಕೈಮರ | |

ದಿಃ21–02–2025 ರಂದು ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು 2020 ಅಕ್ಟೋಬರ್ ರಿಂದ ಆಗುಂಬೆ ವಲಯದಲ್ಲಿ ಉಪ ವಲಯ ಅರಣ್ಯಾಧಿಕಾರಿ ಆಗಿ ಕರ್ತವ್ಯ ಮಾಡುತ್ತಿದ್ದೇನೆ.

ದಿಃ27–05–2022 ರಂದು ಬೆಳಿಗ್ಗೆ 9.30 ಗಂಟೆಗೆ ಚಾಸಾ–4 ರವರು ಕರೆ ಮಾಡಿ ಕಛೇರಿಗೆ ಬನ್ನಿ ಎಂದು ಕರೆದಿರುತ್ತಾರೆ. ಅದರಂತೆ ನಾನು ಕಛೇರಿಗೆ ಹೋದಾಗ ಚಾಸಾ–2 ರಿಂದ 6 ರವರು ಕಛೇರಿಯಲ್ಲಿರುತ್ತಾರೆ. ನಾನು ಹೋದ ನಂತರ ಚಾಸಾ–1 ರವರು ಸಹ ಕಛೇರಿಗೆ ಬಂದಿರುತ್ತಾರೆ. ನಂತರ ಚಾಸಾ–4 ರವರಿಗೆ ಬಂದ ಮಾಹಿತಿಯ ಮೇರೆಗೆ ಇಲಾಖಾ ಜೀಪಿನಲ್ಲಿ ಕೂಡ್ಲು ಗ್ರಾಮದ ಬಿಕ್ಕವಳ್ಳಿ ಮಜಿರೆಗೆ ಚಾಸಾ–1 ಮತ್ತು 3 ರಿಂದ 6 ರವರು ಹೋಗಿರುತ್ತೇವೆ. ಕೂಡ್ಲು ಗ್ರಾಮದ ಸ.ನಂ.139 ರಲ್ಲಿ ಆರೋಪಿಯ ಮನೆಯ ಬಳಿ ಹೋದಾಗ ಜೆ.ಸಿ.ಬಿ ಯಂತ್ರ ಮಣ್ಣು ತೆಗೆಯುತ್ತಿತ್ತು. ಜೆ.ಸಿ.ಬಿ ಚಾಲಕ ಸಂಜು ಮತ್ತು ಆರೋಪಿ ಸ್ಥಳದಲ್ಲಿದ್ದರು. ಚಾಸಾ–4 ರವರ ಸೂಚನೆಯ ಮೇರೆಗೆ ಸ್ಥಳ ಮಹಜರ್ ನ್ನು 10.00 ಗಂಟೆಯಿಂದ 11.00 ಗಂಟೆಯವರೆಗೆ ಮಾಡಿರುತ್ತೇವೆ.

ಚಾಸಾ-4 ರವರ ಸೂಚನೆಯ ಮೇರೆಗೆ ಚಾಸಾ-1 ರವರು ಜೆ.ಸಿ.ಬಿ ಯಂತ್ರವನ್ನು ಇಲಾಖಾ ಪರ ವಶಪಡಿಸಿಕೊಳ್ಳಲು ಮುಂದಾದಾಗ ಸ್ಥಳದಲ್ಲಿದ್ದ ಆರೋಪಿಯು ಹಲ್ಲೆಗೆ ಮುಂದಾಗಿದ್ದು, ಬಲಗೈಯಿಂದ ಚಾಸಾ-1 ರವರ ಎಡಭಾಗದ ಎದೆಗೆ ಗುದ್ದಿ ಜೇಬನ್ನು ಹರಿದು ಶರ್ಟ್ ಎಳೆದಾಗ ಶರ್ಟ್ ಕೂಡ ಹರಿದಿರುತ್ತದೆ. ತಡೆಯಲು ಮುಂದಾದ ನನಗೂ ಕೂಡ ಬಲತೊಡೆಗೆ ಒದ್ದು ಬಲಗೈ ಹೆಬ್ಬೆರಳನ್ನು ತಿರುಚಿ ಅಲ್ಲಿಂದ ಪರಾರಿ ಆಗಿರುತ್ತಾರೆ.

ನಂತರ ನಮಗೆ ಗಾಯಗಳು ಆದುದರಿಂದ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ನಾನು ಮತ್ತು ಚಾಸಾ-1 ರವರು ತೀರ್ಥಹಳ್ಳಿ ಜೆ.ಸಿ ಆಸ್ಪತ್ರೆಗೆ ಸುಮಾರು 11.30 ಗಂಟೆಯ ಸಮಯಕ್ಕೆ ದಾಖಲಾಗಿರುತ್ತೇವೆ. ಚಿಕಿತ್ಸೆ ಪಡೆದುಕೊಂಡು ಮರುದಿನ ಡಿಸ್ಚಾರ್ಜ್ ಆಗಿರುತ್ತೇವೆ. ದಿಃ28-05-2022 ರಂದು ಠಾಣೆಗೆ ಹೋಗಿ ನನ್ನ ಹೇಳಿಕೆ ಕೊಟ್ಟು ಬಂದಿರುತ್ತೇನೆ.

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿ.ಎಲ್.ಎಂ ವಕೀಲರಿಂದ**

ನಾನು ಘಟನೆಯ ದಿನ ಹೊಸಹಳ್ಳಿ ಗ್ರಾಮಕ್ಕೆ ಬೆಳಿಗ್ಗೆ 09.00 ಗಂಟೆಗೆ ಗಸ್ತಿಗಾಗಿ ನಾನು ಒಬ್ಬನೇ ಹೋಗಿದ್ದೆ. ನಾನು ಹೊಸಹಳ್ಳಿಯಲ್ಲಿದ್ದಾಗ ಚಾಸಾ-4 ರವರು ನನಗೆ ಮಾಹಿತಿ ಕೊಟ್ಟಿರುತ್ತಾರೆ. ನಾನು ನನ್ನ ಸ್ವಂತ ಬೈಕಿನಲ್ಲಿ ಹೋಗಿದ್ದೆ. ಹೊಸಹಳ್ಳಿಯಿಂದ ಮೇಗರವಳ್ಳಿ ವಲಯ ಅರಣ್ಯ ಕಛೇರಿಯು ಸುಮಾರು 6 ಕಿ.ಮೀ. ಅಂತರದಲ್ಲಿರುತ್ತದೆ. ನಮಗೆ ಕಛೇರಿಗೆ ಬರಲು ಚಾಸಾ-4 ರವರು ಕೊಟ್ಟಿದ್ದರು. ನಾನು ಕಛೇರಿಗೆ ಹೋದಾಗ ಸುಮಾರು 09.30 ಗಂಟೆ ಆಗಿತ್ತು. ಕಛೇರಿಯಲ್ಲಿ ನಾನು ಹೋದಾಗ ವಲಯ ಅರಣ್ಯಾಧಿಕಾರಿಯವರು ಕಛೇರಿಗೆ ಬಂದಿರಲಿಲ್ಲ. ಕಛೇರಿಯ ಪಕ್ಕದಲ್ಲೇ ವಲಯ ಅರಣ್ಯಾಧಿಕಾರಿಯವರ ಕ್ವಾಟ್ರಸ್ ಇರುತ್ತದೆ ಎಂದರೆ ಸರಿ. ನಾನು ಅವರನ್ನು ಬೇಟಿ ಆಗಿ ಮಾತುಕತೆ ನಡೆಸಿಲ್ಲ. ಕಛೇರಿಯಿಂದ ಕಿರಣ್, ಸುನಿಲ್, ಚಾಲಕ ಸುಧೀರ್, ಗಣೇಶ್ ಮತ್ತು ನಾನು ಜೀಪಿನಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಕಛೇರಿಯಿಂದ ಘಟನಾ ಸ್ಥಳ

ಸುಮಾರು 15 ಕಿ.ಮೀ. ದೂರ ಆಗುತ್ತದೆ. ನಮ್ಮ ಕಛೇರಿಯ ಪಕ್ಕದಲ್ಲೇ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಸ್ಥಳಕ್ಕೆ ಹೋಗುವಾಗ ಮಾರ್ಗಮಧ್ಯದಲ್ಲಿ ಪಂಚರಾಗಿ ಬರುವಂತೆ ಕೇಳಿಕೊಂಡಿರುತ್ತೇವೆ. ಆದರೆ ಯಾರೂ ಬರಲಿಲ್ಲ. ನಾವು ಕಲ್ಮನೆ ಬಳಿ ಕರೆದಿರುತ್ತೇವೆ. ಮೇಗರಳ್ಳಿಯಿಂದ ಘಟನಾ ಸ್ಥಳಕ್ಕೆ ಹೋಗುವಾಗ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ನಮಗೆ ಮಾಹಿತಿಯು ಫೋನ್ ಮುಖಾಂತರ ಬಂದಿರುತ್ತದೆ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಅವರನ್ನು ಪಂಚರಾಗಿ ಬರಲು ಕೇಳಿಕೊಂಡಿರುತ್ತೇವೆ. ಆದರೆ ಅವರು ಬರಲಿಲ್ಲ. ನಾವು ಸ್ಥಳಕ್ಕೆ ಹೋದಾಗ ಅಭಿಷೇಕ್ ಕಾವಡಿರವರು ಸ್ಥಳದಲ್ಲಿದ್ದರು. ಅವರು ಬೈಕ್ ಮುಖಾಂತರ ಹೋಗಿದ್ದರು. ಆಗ ಸಮಯ ಸುಮಾರು 09.30 ಗಂಟೆ ಆಗಿತ್ತು. ನಾವು ಸ್ಥಳಕ್ಕೆ ಹೋದಾಗ ಜೆ.ಸಿ.ಬಿ ಯಂತ್ರವು ಕೆಲಸ ಮುಗಿಸಿ ನಿಂತಿತ್ತು.

ಆರೋಪಿಯ ಮನೆಯು ಸುಮಾರು 40 ವರ್ಷದಷ್ಟು ಹಳೆಯದ್ದಾಗಿರುತ್ತದೆ. ಆರೋಪಿಯ ಮನೆಯ ಹಿಂಭಾಗದಲ್ಲಿ ಕಟ್ಟಿಗೆ ಕೊಟ್ಟಿಗೆ, ಜಾನುವಾರು ಕೊಟ್ಟಿಗೆ, ಟ್ರಾಕ್ಟರ್ ಕೊಟ್ಟಿಗೆಗಳು ಇರುತ್ತವೆ. ತೆಂಗಿನ ಮರಗಳು ಸುಮಾರು ಎಷ್ಟು ಇದೆ ಎಂದರೆ ನನಗೆ ನೆನಪಿಲ್ಲ, 2-3 ಇರಬಹುದು. ಆರೋಪಿಯ ಮನೆಯ ಸುತ್ತ ಬೇಲಿ ಇರುತ್ತದೆ. ಅದು ಕಲ್ಲುಕಂಬದ ಬೇಲಿಯಾಗಿರುತ್ತದೆ. ಆರೋಪಿಯ ಮನೆಯ ಅಕ್ಕಪಕ್ಕದಲ್ಲಿ ಸುಮಾರು 100 ಮೀಟರ್ ಅಂತರದಲ್ಲಿ ಬೇರೆಯವರ ಮನೆಗಳು ಇರುತ್ತದೆ. ಆರೋಪಿಯ ಮನೆಗೆ ಹೋಗಲು ರಸ್ತೆ ಇರುತ್ತದೆ.

ಚಾಸಾ-3 ರವರು ಮಹಜರ್ ನ್ನು ಬರೆದಿರುತ್ತಾರೆ. ಚಾಸಾ-4 ರವರ ಸೂಚನೆ ಮೇರೆಗೆ ಬರೆದಿರುತ್ತಾರೆ. ಮಹಜರ್ ಸಮಯದಲ್ಲಿ ಪಂಚರನ್ನು ಕರೆಯಿಸಿರುತ್ತೇವೆ, ಆದರೆ ಬರಲಿಲ್ಲ. ಚಾಸಾ-4 ರವರು ಅಕ್ಕಪಕ್ಕದ ಮನೆಗೆಹೋಗಿ ಕರೆದಿರುತ್ತಾರೆ. ಆದರೆ ಅವರು ಪಂಚರಾಗಿ ಬರಲು ಸಹಕರಿಸಲಿಲ್ಲ. ಸದರಿ ಮನೆಗಳು ಕೂಡ್ಲು ಸ.ನಂ.139 ರಲ್ಲಿರುತ್ತದೆ. ಸ.ನಂ.139 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸ.ನಂ.139 ರಲ್ಲಿ 50 ಎಕರೆ ಮೈನರ್ ಫಾರೆಸ್ಟ್ 36 ಎಕರೆ ಖಾಸಗಿ ಗೋಮಾಳ ಪ್ರದೇಶ ಇರುತ್ತದೆ. ಅದೇ ರೀತಿ ಗೋಮಾಳ ಜಮೀನು ಯಾರು ಯಾರಿಗೆ ಮಂಜೂರಾಗಿರುತ್ತದೆ ಮತ್ತು ಯಾರು ಯಾರು

ಸ್ವಾಧೀನದಲ್ಲಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಗಣೇಶ್ ರವರಿಗೆ ಜೆ.ಸಿ.ಬಿ ಯನ್ನು ಚಾಲನೆ ಮಾಡಲು ಬರುವುದಿಲ್ಲ. ಚಾಸಾ–4 ರವರು ಸದರಿ ಜೆ.ಸಿ.ಬಿ ಯನ್ನು ವಶಪಡಿಸಿಕೊಳ್ಳಲು ಸೂಚಿಸಿದ ಮೇರೆಗೆ ಚಾಸಾ–1 ರವರು ವಶಪಡಿಸಿಕೊಳಳಲು ಹೋಗಿರುತ್ತಾರೆ. ನಾನು ಮತ್ತು ಚಾಸಾ–1 ರವರು ಸ್ಥಳಕ್ಕೆ ಹೋದಾಗ ಜೆ.ಸಿ.ಬಿ ಅಲ್ಲೇ ಇತ್ತು. ಚಾಸಾ–1 ರವರು ಸದರಿ ಜೆ.ಸಿ.ಬಿ ಯನ್ನು ಚಲಾಯಿಸಲಿಲ್ಲ. ಆರೋಪಿಯ ವಿರುದ್ಧ ಎಫ್.ಒ.ಸಿ ಕೇಸಿನಲ್ಲಿ ಅರೆಸ್ಟ್ ಆಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಇದ್ದಂತಹ ಸ್ಥಳಕ್ಕೂ ಮತ್ತು ಜೆ.ಸಿ.ಬಿ ಇದ್ದಂತಹ ಸ್ಥಳಕ್ಕೂ ಸುಮಾರು 30 ಅಡಿ ಅಂತರ ಇತ್ತು. ಸದರಿ ಜೆ.ಸಿ.ಬಿ ಯು ಆರೋಪಿಯ ಮನೆಯ ಸುತ್ತ ಇರುವಂತಹ ಬೇಲಿಯ ಒಳಗಡೆ ಇತ್ತು. ಅಭಿಷೇಕ್ ಕಾವಡಿರವರಿಗೆ ಆರೋಪಿ ಹಲ್ಲೆ ಮಾಡಿರುವುದಿಲ್ಲ. ಚಾಸಾ–1 ಮತ್ತು ನನಗೆ ಹಲ್ಲೆ ಮಾಡಿರುತ್ತಾರೆ. ನಾನು ಜೆ.ಸಿ.ಬಿ ಯನ್ನು ವಶಪಡಿಸಿಕೊಳ್ಳಲು ಹೋಗಲಿಲ್ಲ. ನಾವು ಎಲ್ಲರೂ ಸಮವಸ್ತ್ರದಲ್ಲಿದ್ದೆವು. ನನ್ನ ಸಮವಸ್ತ್ರ ಹರಿದು ಹೋಗಿರುವುದಿಲ್ಲ.

ಚಾಸಾ–1 ರವರಿಗೆ ಎಡಭಾಗದ ಎದೆಗೆ ಗುದ್ದಿರುತ್ತಾರೆ. ಅವರ ಎಡಭಾಗದ ಸಮವಸ್ತ್ರ ಹರಿದಿರುತ್ತದೆ ಮತ್ತು ಸಮವಸ್ತ್ರದ ಶರ್ಟ್ ನ ಎಡಭಾಗದ ಜೇಬು ಮತ್ತು ಕೆಳಭಾಗ ಹರಿದಿರುತ್ತದೆ, ಗುಂಡಿಗಳು ಕಿತ್ತುಹೋಗಿರುತ್ತದೆ. ನಾನು ಆ ಸಮಯದಲ್ಲಿ ಆರೋಪಿಯನ್ನು ತಡೆಯಲು ಹೋದೆ. ಆ ಸಮಯದಲ್ಲಿ ಆರೋಪಿಯು ನನ್ನ ಬಲಭಾಗದ ತೊಡೆ ಮತ್ತು ನನ್ನ ಬಲಭಾಗದ ಮುಂಗೈನ ಹೆಬ್ಬೆರಳನ್ನು ತಿರುಚಿರುತ್ತಾರೆ. ನಮಗೆ ಯಾವುದೇ ರೀತಿಯ ರಕ್ತಗಾಯ ಆಗಿರುವುದಿಲ್ಲ. ಆ ದಿನ ಜೆ.ಸಿ.ಬಿ ಯನ್ನು ಸೀಜ್ ಮಾಡಿ ತೆಗೆದುಕೊಂಡು ಬರಲಿಲ್ಲ. ನಂತರ ಚಾಸಾ–4 ರವರು ವಶಪಡಿಸಿಕೊಂಡಿರುತ್ತಾರೆ. ನಾವು ನಮಗೆ ಹಲ್ಲೆ ಆದ ತಕ್ಷಣ ಚಿಕಿತ್ಸೆಗಾಗಿ ಸ್ಥಳದಿಂದ ಹೊರಟುಹೋಗಿರುತ್ತೇವೆ. ನಾವು ಇಲಾಖಾ ಜೇಪಿನಲ್ಲಿ ನಾನು, ಚಾಸಾ–1 ಹಾಗೂ ಚಾಲಕ ಸುಧೀರ್ ರವರು ಹೋಗಿರುತ್ತೇವೆ. ಚಾಸಾ–3 ರವರು ಸಹ ನಮ್ಮ ಜೊತೆ ಆಸ್ಪತ್ರೆಗೆ ಬಂದಿರುತ್ತಾರೆ. ನಾವು ಕೊಡ್ಲು –ಕಲ್ಮನೆ – ತೀರ್ಥಹಳ್ಳಿ ಮಾರ್ಗವಾಗಿ ತೀರ್ಥಹಳ್ಳಿ ಆಸ್ಪತ್ರೆಗೆ ಬಂದಿರುತ್ತೇವೆ.

ಕಲ್ಮನೆಯಿಂದ ಮೇಗರವಳ್ಳಿ ಸುಮಾರು 5 ಕಿ.ಮೀ. ಅಂತರ ಇರುತ್ತದೆ. ಕಲ್ಮನೆಗೆ ಹತ್ತಿರದ ಆಸ್ಪತ್ರೆ ಎಂದರೆ ಮೇಗರವಳ್ಳಿ ಆಸ್ಪತ್ರೆ ಎಂದರೆ ಸರಿ. ನಾವು ಆಸ್ಪತ್ರೆಗೆ ದಾಖಲಾಗುವ ಮುಂಚೆ ಮಾರ್ಗಮಧ್ಯದಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳನ್ನು ಮೊಬೈಲಿನಲ್ಲಿ ಕಂಟಾಕ್ಟ್ ಮಾಡಿರುವುದಿಲ್ಲ. ಘಟನೆ ಆದ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ಆಸ್ಪತ್ರೆಯಲ್ಲಿ ನಾನು ಒಂದು ದಿನ ಮಾತ್ರ ದಾಖಲಾಗಿರುತ್ತೇನೆ. ಆಸ್ಪತ್ರೆಗೆ ಬೆಳಿಗ್ಗೆ 11.30 ಗಂಟೆಗೆ ಬಂದಿರುತ್ತೇವೆ. ಮಾರನೇ ದಿನ ಬೆಳಿಗ್ಗೆ 07.00 ಗಂಟೆಗೆ ಚಾಸಾ-1 ಮತ್ತು ನಾನು ಡಿಸ್ಚಾರ್ಜ್ ಆಗಿರುತ್ತೇವೆ. ನಂತರ ಸಂದೇಶ್ ರವರ ಜೀಪನ್ನು ತರಿಸಿಕೊಂಡು ನಮ್ಮ ಮನೆಗಳಿಗೆ ಹೋಗಿರುತ್ತೇವೆ. ಆ ಸಮಯದಲ್ಲಿ ನಾನು ಕೈಮರದಲ್ಲಿ ವಾಸವಾಗಿದ್ದೆ. 2020 ಅಕ್ಟೋಬರ್ ನಿಂದ ಇಲ್ಲಿಯವರೆಗೂ ಕೈಮರದಲ್ಲಿ ವಾಸವಾಗಿರುತ್ತೇನೆ.

ಘಟನೆಯ ಬಗ್ಗೆ ಚಾಸಾ-1 ರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ಚಾಸಾ-1 ರವರು ತಮ್ಮ ಸಮವಸ್ತ್ರವನ್ನು ಯಾರಿಗೆ ಎಲ್ಲಿ ಕೊಟ್ಟಿರುತ್ತಾರೆ ನೆನಪಿಲ್ಲ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ನನ್ನ ಬೈಕಿನಲ್ಲಿ ಠಾಣೆಗೆ ಸುಮಾರು 11.30 ಗಂಟೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ನಮ್ಮ ಇಲಾಖೆಗೆ ಸಂಬಂಧಿಸಿದ ವ್ಯಕ್ತಿಗಳು ಯಾರು ಇರಲಿಲ್ಲ. ಆದರೆ ಆರಕ್ಷಕ ಉಪನಿರೀಕ್ಷಕರಾದ ಶಿವಕುಮಾರ್ ಠಾಣೆಯಲ್ಲಿದ್ದರು. ನಾನು ಆಸ್ಪತ್ರಯಿಂದ ಡಿಸ್ಚಾರ್ಜ್ ಆದ ನಂತರ ಪೊಲೀಸರು ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ತೆ ನ್ಯಾ.ಬೆ ಮಾಡಲಾಯಿತು.**

**ಓ ಹೇ ಕೇ ಸರಿಯಿದೆ.**

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**